(ಇ) ಆಯ್ಕೆ ಸಮಿತಿಯು ಸ್ಪೆಷಲಿಷ್ಟ್/ಕನ್ಸ್‌ಲ್ಟೆಂಟ್‌ರವರ ಕಾರ್ಯನಿರ್ವಹಣೆ ಮತ್ತು ಅವರಿಗೆ ವಹಿಸಲಾಗುವ ಕಾರ್ಯಚಟುವಟಿಕೆಗಳ ಕುರಿತು ಅವರೊಂದಿಗೆ ಸಮಾಲೋಚಿಸುವುದು. ಸಂಸ್ಥೆಯ ಹಿತದೃಷ್ಟಿಯಿಂದ ಸ್ಪೆಷಲಿಷ್ಟ್/ ಕನ್ಸ್‌ಲ್ಟೆಂಟ್‌ರವರ ಪರಿಣಿತಿಯನ್ನು ಗರಿಷ್ಟಮಟ್ಟದಲ್ಲಿ ಉಪಯೋಗ ಪಡೆಯಲು ಇಲಾಖಾ ಮುಖ್ಯಸ್ಥರು/ಅಧಿಕಾರಿ ವರ್ಗ ಮತ್ತು ಬೋಧಕ ಸಿಬ್ಬಂದಿಯವರು ಸಹಕರಿಸತಕ್ಕದ್ದು.

**6. ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪ್ರವೇಶಾತಿ:**

(i) ವಿಶ್ವೇಶ್ವರಪುರ ಫಾರ್ಮಸೂಟಿಕಲ್ ಸೈನ್ಸಸ್ ಸಂಸ್ಥೆಯಲ್ಲಿ ಡಿ–ಫಾರ್ಮ್, ಬಿ–ಫಾರ್ಮ್, ಎಂ–ಫಾರ್ಮ್, ಫಾರ್ಮ್–ಡಿ ಮತ್ತು ಫಾರ್ಮ್–ಡಿ(ಪಿ.ಬಿ.) ಕೋರ್ಸುಗಳನ್ನು ನಡೆಸಲಾಗುತ್ತಿದೆ. ಈ ಸಂಸ್ಥೆಯಲ್ಲಿ 5 ಸ್ಪೆಷಾಲಿಟಿ/ ಇಲಾಖೆಗಳು ಇರುತ್ತವೆ.

(ii) ಭಾರತೀಯ ಫಾರ್ಮಸಿ ಪರಿಷತ್ತು ನಿಯಮಗಳು, 2014 ರನ್ವಯ ಬೋಧಕ ಸಿಬ್ಬಂದಿ : ವಿದ್ಯಾರ್ಥಿ ಅನುಪಾತವು ಬಿ–ಫಾರ್ಮ್ ಕೋರ್ಸಿಗೆ 1:15 ಇರುತ್ತದೆ. ಎಂ–ಫಾರ್ಮ್, ಫಾರ್ಮ್–ಡಿ ಮತ್ತು ಫಾರ್ಮ್–ಡಿ(ಪಿ.ಬಿ.) ಕೋರ್ಸುಗಳಿಗೆ ಸಂಬಂಧಿಸಿದಂತೆ ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಅನುಪಾತ ಪ್ರಮಾಣವು 1:12 ಆಗಿರುತ್ತದೆ. ಭಾರತೀಯ ಫಾರ್ಮಸಿ ಪರಿಷತ್ತು ಯಾವುದೇ ಫಾರ್ಮಸಿ ಕಾಲೇಜು/ಸಂಸ್ಥೆಯಲ್ಲಿ ಡಿ–ಫಾರ್ಮ್–60 ಸೀಟುಗಳು, ಬಿ–ಫಾರ್ಮ್–60 ಸೀಟುಗಳು, ಫಾರ್ಮ್–ಡಿ–30 ಸೀಟುಗಳು ಮತ್ತು ಫಾರ್ಮ್–ಡಿ(ಪಿ.ಬಿ.)–10 ಸೀಟುಗಳನ್ನು ಒಳಗೊಂಡ ಕೋರ್ಸುಗಳನ್ನು ನಡೆಸಲು ಅವಶ್ಯಕವಾದ ಸಿಬ್ಬಂದಿ ಮಾದರಿಯನ್ನು ನಿಗದಿಪಡಿಸಿರುತ್ತದೆ. ಇದಲ್ಲದೆ, ಭಾರತೀಯ ಫಾರ್ಮಸಿ ಪರಿಷತ್ತಿನ ಮಾರ್ಗಸೂಚಿಗಳಲ್ಲಿ ಎಂ–ಫಾರ್ಮ್ ಕೋರ್ಸುಗಳಿಗೆ ಸಂಬಂಧಿಸಿದಂತೆ ಪ್ರತಿ ಸ್ಪೆಷಾಲಿಟಿಗೆ ಅನ್ವಯಿಸುವಂತೆ 2 ಅಸೋಸಿಯೇಟ್ ಪ್ರೊಫೆಸರ್ ಮತ್ತು 2 ಅಸಿಸ್ಟೆಂಟ್ ಪ್ರೊಫೆಸರ್ ಹೆಚ್ಚುವರಿ ಬೋಧಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಮಾರ್ಗಸೂಚಿಗಳು ವಿಶ್ವೇಶ್ವರಪುರ ಇನ್ಸ್‌ಟಿಟ್ಯೂಟ್ ಆಫ್ ಫಾರ್ಮಸೂಟಿಕಲ್ ಸೈನ್ಸಸ್ ಸಂಸ್ಥೆಗೂ ಸಹ ಅನ್ವಯಮಾಗುತ್ತದೆ.

(iii) ಭಾರತೀಯ ಫಾರ್ಮಸಿ ಪರಿಷತ್ತು ಹೊರಡಿಸಿರುವ ಮಾರ್ಗಸೂಚಿಗಳನ್ವಯ ಎಂ.ಫಾರ್ಮ್ ವಿದ್ಯಾರ್ಹತೆಯೊಂದಿಗೆ 5 ವರ್ಷಗಳ ಬೋಧನಾ ಅನುಭವ ಹೊಂದಿರುವ ಸಿಬ್ಬಂದಿಯನ್ನು ಎಂ.ಫಾರ್ಮ್ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬೋಧನಾ ಸಿಬ್ಬಂದಿಯಾಗಿ ಪರಿಗಣಿಸಬಹುದಾಗಿದೆ.

(iv) ಭಾರತೀಯ ಫಾರ್ಮಸಿ ಪರಿಷತ್ತು ನಿಯಮಗಳು, 2014 ದಿನಾಂಕ:11.11.2014ರಿಂದ ಜಾರಿಗೆ ಬಂದಿರುತ್ತದೆ. ಈ ನಿಯಮಗಳನ್ವಯ ಎಲ್ಲಾ ಬೋಧಕ ಸಿಬ್ಬಂದಿಗೆ ಕನಿಷ್ಠ ವಿದ್ಯಾರ್ಹತೆ ಬಿ–ಫಾರ್ಮ್ ಪದವಿ ಪ್ರಥಮ ದರ್ಜೆಯಲ್ಲಿ ಮತ್ತು ಎಂ–ಫಾರ್ಮ್ ಪದವಿ ಆಗಿರುತ್ತದೆ. ಈ ಎಲ್ಲಾ ವಿದ್ಯಾರ್ಹತೆಗಳು ಭಾರತೀಯ ಫಾರ್ಮಸಿ ಪರಿಷತ್ತಿನಿಂದ ಅಂಗೀಕೃತವಾಗಿರತಕ್ಕದ್ದು. 2008ರ ಭಾರತೀಯ ಫಾರ್ಮಸಿ ಪರಿಷತ್ತು ನಿಯಮಗಳಲ್ಲಿ ಬೋಧಕ ಸಿಬ್ಬಂದಿಗೆ ಕನಿಷ್ಠ ವಿದ್ಯಾರ್ಹತೆಯು ಬಿ–ಫಾರ್ಮ್ ಪದವಿ ಮತ್ತು ಎಂ–ಫಾರ್ಮ್ ಪದವಿ ಪ್ರಥಮ ದರ್ಜೆಯಲ್ಲಿ ಹೊಂದಿರತಕ್ಕದ್ದೆಂದು ನಿಗದಿಪಡಿಸಲಾಗಿತ್ತು.

(v) ಭಾರತೀಯ ಫಾರ್ಮಸಿ ಪರಿಷತ್ತು 2014 ರ ನಿಯಮಾವಳಿಗಳ ಕೆಳಗೆ ನಮೂದಿಸಿರುವ ಟಿಪ್ಪಣಿಯನ್ವಯ "ಹಾಲಿ ಖಾಯಂ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯು ಬಾಧಿತರಾಗತಕ್ಕದ್ದಲ್ಲ. ಆದಾಗ್ಯೂ ಇಂತಹ ಬೋಧಕ ಸಿಬ್ಬಂದಿಯ ಬಡ್ತಿಯು ಈ ನಿಯಮಾವಳಿಗಳನ್ವಯ ಇರತಕ್ಕದ್ದಾಗಿದೆ".

(i) **ಬೋಧಕ ಸಿಬ್ಬಂದಿ ಹುದ್ದೆಗಳಿಗೆ:-**

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ಔಷಧ ನಿಯಂತ್ರಕರಿಂದ ವಿಷಯ ಪರಿಣಿತರಾಗಿ ನಾಮನಿರ್ದೇಶಿಸಲ್ಪಟ್ಟ ಸರ್ಕಾರಿ/ಯೂನಿವರ್ಸಿಟಿ/ಅನುದಾನಿತ ಫಾರ್ಮಸಿ ಕಾಲೇಜಿನ ಪ್ರೊಫೆಸರ್. | ಸದಸ್ಯರು |
| (ಇ) | ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮೂಲಕ ವಿಷಯ ಪರಿಣಿತರಾಗಿ ನಾಮ ನಿರ್ದೇಶಿಸಲ್ಪಟ್ಟ ಹೊರ ರಾಜ್ಯದ ಪ್ರೊಫೆಸರ್. | ಸದಸ್ಯರು |
| (ಈ) | ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮೂಲಕ ವಿಷಯ ಪರಿಣಿತರಾಗಿ ನಾಮ ನಿರ್ದೇಶಿಸಲ್ಪಟ್ಟ ರಾಜ್ಯದ ಯಾವುದೇ ಖಾಸಗಿ ಫಾರ್ಮಸಿ ಕಾಲೇಜಿನ ಪ್ರೊಫೆಸರ್. | ಸದಸ್ಯರು |
| (ಉ) | ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ | ಸದಸ್ಯರು |
| (ಊ) | ಪ್ರಿನ್ಸಿಪಾಲ್, ವಿಶ್ವೇಶ್ವರಪುರ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸೂಟಿಕಲ್ ಸೈನ್ಸಸ್, ಬೆಂಗಳೂರು. | ಸದಸ್ಯ-ಕಾರ್ಯದರ್ಶಿ |

**ಕೋರಂ:** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ 4 ಸದಸ್ಯರು ಕೋರಂ ಆಗಿರತಕ್ಕದ್ದು. ಅವರುಗಳಲ್ಲಿ ಒಬ್ಬರು (ಆ)ರಲ್ಲಿನ ಅಥವಾ (ಇ) ರಲ್ಲಿನ ಸದಸ್ಯರು ಆಗಿರತಕ್ಕದ್ದು.

**(ii) ಬೋಧಕೇತರ ಮತ್ತು ಇತರೆ ಸಿಬ್ಬಂದಿ ಹುದ್ದೆಗಳಿಗೆ:-**

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ಔಷಧ ನಿಯಂತ್ರಕರು, ಬೆಂಗಳೂರು ಇವರಿಂದ ನಾಮನಿರ್ದೇಶಿಸಲ್ಪಟ್ಟ ಉಪನಿರ್ದೇಶಕರು ಅಥವಾ ಮೇಲಿನ ದರ್ಜೆಯ ಅಧಿಕಾರಿ. | |
| (ಇ) | ಆಡಳಿತ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಕೇಂದ್ರ ಸರ್ಕಾರದ /ರಾಜ್ಯ ಸರ್ಕಾರದ ಗ್ರೂಪ್-ಎ ವೃಂದದ ನಿವೃತ್ತ ಅಧಿಕಾರಿ | ಸದಸ್ಯರು |
| (ಈ) | ಸಹಕಾರ ಸಂಘಗಳ ನಿಬಂಧಕರಿಂದ ನಾಮನಿರ್ದೇಶಿಸಲ್ಪಟ್ಟ ಅಧಿಕಾರಿ | ಸದಸ್ಯರು |
| (ಉ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಊ) | ಪ್ರಿನ್ಸಿಪಾಲ್, ವಿಶ್ವೇಶ್ವರಪುರ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸೂಟಿಕಲ್ ಸೈನ್ಸಸ್, ಬೆಂಗಳೂರು. | ಸದಸ್ಯರು |
| (ಋ) | ಆಡಳಿತಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ. | ಸಂಚಾಲಕರು |

**ಕೋರಂ:** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ 4 ಸದಸ್ಯರು ಕೋರಂ ಆಗಿರತಕ್ಕದ್ದು. ಅವರುಗಳಲ್ಲಿ ಒಬ್ಬರು (ಈ)ರಲ್ಲಿನ ಸದಸ್ಯರು ಮತ್ತೊಬ್ಬರು (ಆ) ಅಥವಾ (ಇ) ರಲ್ಲಿನ ಸದಸ್ಯರು ಆಗಿರತಕ್ಕದ್ದು.

10. **ಅರ್ಹ ಅಭ್ಯರ್ಥಿಗಳ ಆಯ್ಕೆ:**

(i) ಆಯ್ಕೆ ಮಂಡಳಿಯು ನಿಗದಿಪಡಿಸಿದ ಆಯ್ಕೆ ವಿಧಾನವನ್ನು ಅಳವಡಿಸಿಕೊಂಡು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ತಯಾರಿಸಿ ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸುವುದು.

